ವಿಷಯ : ಗ್ರಾಮೀಣ ಪ್ರದೇಶದಲ್ಲಿ ವಾಸಿಸುವ ಬಡವರ ಅಭಿವೃದ್ಧಿಗಾಗಿ ಕೇಂದ್ರ ರಾಜ್ಯದ ಯೋಜನೆಗಳು

1382 (1846)-ಶ್ರೀ ಹೆಚ್. ಶಿವಪ್ಪ : ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಗ್ರಾಮೀಣ ಪ್ರದೇಶದಲ್ಲಿ ವಾಸಿಸುವ ಬಡವರ ಅಭಿವೃದ್ಧಿಗಾಗಿ ಕೇಂದ್ರ ಹಾಗೂ ರಾಜ್ಯದ ಯೋಜನೆಗಳು ಯಾವುವು ?

ಆ) ರಾಜ್ಯ ಸರ್ಕಾರದ ಈ ಯೋಜನೆಗಳ ಅನುಷ್ಟನಕ್ಕಾಗಿ 1996-97ನೇ ಅಯವ್ಯಯದಲ್ಲಿ ಇಟ್ಟ ಹಣವೆಷ್ಟು ? ಇದುವರೆವಿಗೂ ಮಾಡಿದ ಖರ್ಚು ಎಷ್ಟು ?

ಇ) ಗ್ರಾಮೀಣ ಪ್ರದೇಶದ ಬಡವರ ಅಭಿವೃದ್ಧಿಗಾಗಿ ಎಷ್ಟ ಹಣವನ್ನು ಕಳಿದ 3 ವರ್ಷಗಳಲ್ಲಿ ಯಾವ ಯಾವ ಯೋಜನೆಗೆ ಕೇಂದ್ರ ಸರ್ಕಾರ ಒದಗಿಸಿದೆ.

ಈ) ಪೂರ್ಣ ಹಣ ಬಡವರ ಅಭಿವೃದ್ಧಿಗಾಗಿ ಖರ್ಚು ಮಾಡದೇ ಉಳಿದಿರುವ ಹಣ ಎಷ್ಟು.

ಉ) ಖರ್ಚು ಮಾಡಿದ ಹಣದಿಂದ ಬಡವರ ಅಭಿವೃದ್ಧಿ ಯಾವ ರೀತಿ ಆಗಿದೆ ?

ಶ್ರೀ ಎಂ. ಪಿ. ಪ್ರಕಾಶ್ (ಗ್ರಾ.ಅ.ಮತ್ತು ಪಂ.ರಾಜ್ ಸಚಿವರು)

ಅ) ಗ್ರಾಮೀಣ ಪ್ರದೇಶದಲ್ಲಿ ವಾಸಿಸುತ್ತಿರುವ ಬಡವರ ಅಭಿವೃದ್ಧಿಗಾಗಿ ಕೇಂದ್ರ ಪುರಸ್ಕೃತ ಯೋಜನೆಗಳು ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆ ಟ್ರೈಸ್ಂ ಯೋಜನೆ, ಡ್ವಾಕ್ರಾ ಯೋಜನೆ, ಇಂದಿರಾ ಆವಾಜ ಯೋಜನೆ, ದಶಲಕ್ಷ ಬಾವಿ ಯೋಜನೆ, ಮತ್ತು ಉದ್ಯೋಗ ಭರವಸೆ ಯೋಜನೆಗಳು ಅನುಷ್ಟಾನದಲ್ಲಿರುತ್ತವೆ. ರಾಜ್ಯ ಸರ್ಕಾರದ ಯೋಜನೆಯಾಗಿ ನೆಮ್ಮದಿ ಯೋಜನೆ ಜಾರಿಯಲ್ಲಿರುತ್ತದೆ.

ಆ) 1996-97ನೇ ಸಾಲಿನಲ್ಲಿ ಈ ಯೋಜನೆಗಳ ಅನುಷ್ಟಾನಕ್ಕಾಗಿ ಈ ಕೆಳಗಿನಂತೆ ಆಯವ್ಯಯದಲ್ಲಿ ಹಣ ಇಡಲಾಗಿದೆ (ಲಕ್ಷ ರೂಗಳಲ್ಲಿ)

	ಯೋಜನೆಗಳು	ಇಟ್ಟಿರುವ ಅನುದಾನ	28-2-97ಕ್ಕೆ ಖರ್ಚಾದ ಹಣ
1.	ಸ.ಗ್ರಾ.ಅ.ಯೋ	5271.00	4808.15
2.	ಟ್ರೈಸಂ	540.00	489.72
3.	ಡ್ವಾಕ್ರಾ	167.88	237.07
4.	ಜವಿರೋ.ಯೋ.	11665.33	8520.088
5.	ಇಂ.ಅ.ಯೋ	7445.36	6211.042
6.	ಉ.ಭ.ಯೋ	10000.00	10513.575
7.	ದಶಲಕ್ಷ ಬಾವಿ ಯೋ	2915.55	1683.257
8.	ನೆಮ್ಮದಿ	507.00	110.422

ಕಳೆದ 3 ವರ್ಷಗಳಲ್ಲಿ ಕೇಂದ್ರ ಸರ್ಕಾರ ಒದಗಿಸಿದ ಹಣ ಈ ಕೆಳಗಿನಂತಿದೆ

(ಲಕ್ಷ ರೂ.ಗಳಲ್ಲಿ)

ಯೋಜನೆ	93-94	94-95	95-96
ಸಗ್ರಾಅಯೋ	2466.33	2506.29	2883.25
ಟ್ರೈಸಂ	28.05	339.23	283.38
ಡ್ವಾಕ್ರಾ	28.05	27.34	112.00
ಜರೋಯೋ	7979.29	8820.41	9666.01
ಇಂಅಯೋ	1308.92	1516.36	6213.31
ದಶಲಕ್ಷ ಬಾವಿ	3896.03	4438.60	23322.45
ಉ.ಬ.ಯೋ	2820.00	6606.40	10970.00

ಇ) ಯೋಜನೆಗಳಿಗೆ ಮಾಡಲಾದ ವೆಚ್ಚ ಮತ್ತು ಶಿಲ್ಕು ಮಾಹಿತಿಯನ್ನು ಅನುಬಂಧ-1ರಲ್ಲಿ ಕೊಡಲಾಗಿದೆ.

ಈ) ಸಗ್ರಾಲಿಯೋ: ಬಡತನ ರೇಖೆಗಿಂತ ಕೆಳಗಿರುವಂತಹ ಗ್ರಾಮೀಣ ಜನತೆಗಾಗಿಯೇ ಹಮ್ಮಿಕೊಂಡಿರುವ ಈ ಯೋಜನೆಯಿಂದ ಫಲಾನುಭವಿಗಳು ಅವರ ಜೀವನೋಪಾಯಕ್ಕಾಗಿ ವಿವಿಧ ವೃತ್ತಿಗಳನ್ನು ಅಂದರೆ ಗುಡಿ ಕೈಗಾರಿಕೆ, ಪಶುಪಾಲನೆ, ಹೈನುಗಾರಿಕೆ, ವ್ಯಾಪಾರ, ಸಸ್ಯ ಕೈಗಾರಿಕೆ, ಪಶುಪಾಲನೆ, ಹೈನುಗಾರಿಕೆ, ವ್ಯಾಪಾರ, ಸಸ್ಯಸಂರಕ್ಷಣೆ, ಕುರಿಸಾಕಾಣಿಕೆ, ವ್ಯವಸಾಯ ಮುಂತಾದವುಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಆರ್ಥಿಕವಾಗಿ ಅಭಿವೃದ್ಧಿಯಾಗಿರುವುದು ಕಂಡುಬರುತ್ತದೆ.

ಟ್ರೈಸಂ: ಈ ಕಾರ್ಯಕ್ರಮದಡಿ ಅನೇಕ ವೃತ್ತಿಗಳಲ್ಲಿ ತರಬೇತಿಯನ್ನು ಹೊಂದಿ ಗ್ರಾಮೀಣ ಯುವ ಜನತೆಯು ಸ್ವಉದ್ಯೋಗಿಗಾಳಾಗಿರುತ್ತಾರೆ. ಕೆಲವರು ಕೂಲಿಕಾರ್ಮಿಕರಾಗಿ ಜೀವನ ನಡೆಸುತ್ತಿದ್ದಾರೆ.

ಡ್ವಾಕ್ರಾ : ಮಹಿಳೆಯ ಅಭಿವೃದ್ಧಿಗಾಗಿಯೇ ವಿಶೇಷವಾಗಿ ಹಮ್ಮಿಕೊಂಡಿರುವ ಈ ಕಾರ್ಯಕ್ರಮದ ಪ್ರಯೋಜನೆಯಿಂದ ಗ್ರಾಮೀಣ ಮಹಿಳೆಯರು ಆಕರ್ಷಿತರಾಗಿ ಅನೇಕ ಗುಡಿ ಕೈಗಾರಿಕೆಗಳು, ವ್ಯಾಪಾರ ಮುಂತಾದವುಗಳಲ್ಲಿ ತಮ್ಮ ಬಿಡುವಿನ ವೇಳೆಯನ್ನು ಸದುಪಯೋಗ ಪಡಿಸಿಕೊಳ್ಳುತ್ತಿದ್ದಾರೆ. ಸಂಸಾರ ನಿರ್ವಹಣೆಗೆ ಆರ್ಥಿಕವಾಗಿಯೂ ಮಹಿಳೆಯರು ತಮ್ಮ ಪಾಲಿನ ನೆರವು ನೀಡವುತ್ತಿರುವುದು ಒಂದು ಉತ್ತಮ ಬೆಳವಣಿಗೆ ಹಾಗೂ ಅವರಿಗೆ ನೈತಿಕ ಸ್ಥೈರ್ಯ ದೊರಕಿಸಿಕೊಟ್ಟಿದೆ.

ಜೆ.ಆರ್.ವೈ : ಈ ಯೋಜನೆಯಡಿ ರಸ್ತೆ, ಚರಂಡಿ, ಸಮುದಾಯ ಭವನ, ಪ್ರಾಥಮಿಕ ಶಾಲಾ ಕಟ್ಟಡ, ಅಂಗನವಾಡಿ, ಸಮುದಾಯ ಭವನ, ಪ್ರಾಥಮಿಕ ಶಾಲಾ ಕಟ್ಟಡ, ಅಂಗನವಾಡಿ, ಸಾಮಾಜಿಕ ಅರಣ್ಯ, ಪಂಚಾಯತ ಕಟ್ಟಡ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ವೈಯಕ್ತಿಕ ಲಾಭದಾಯಕ ಆಸ್ತಿಗಳು, ಜನಶಿಕ್ಷಣ ನಿಲಯ ಇತ್ಯಾದಿ.

ಇಂದಿರಾ ಅವಾಜ್‌ಯೋಜನೆ: ಈ ಯೋಜನೆಯಡಿ ಬಡ ಕುಟುಂಬಗಳಿಗಾಗಿ ಮನೆಗಳನ್ನು ತೆಗೆದುಕೊಳ್ಳಲಾಗಿದೆ.

ದಶಲಕ್ಷ ಬಾವಿ ಯೋಜನೆ : ಈ ಯೋಜನೆಯಡಿ ತೆರೆದ ಬಾವಿ, ಭೂಸಾರ ಸಂರಕ್ಷಣಾ ಕಾಮಗಾರಿಗಳು, ಸಣ್ಣ ನೀರಾವರಿ ಇತ್ಯಾದಿ.

ಉ.ಭ.ಯೋ : ಈ ಯೋಜನೆಯಡಿ ರಸ್ತೆ, ಕಟ್ಟಡ, ಸಣ್ಣ ನೀರಾವರಿ, ಅರಣ್ಯ, ಅಂಗವಾಡಿ, ಪ್ರಾಥಮಿಕ ಶಾಲಾಕಟ್ಟಡ ತೋಟಗಾರಿಕೆ ಕಾಮಗಾರಿಗಳು ಇತ್ಯಾದಿ.

ನೆಮ್ಮದಿ : ಈ ಯೋಜನೆಯಡಿ ರಸ್ತೆ, ಸಣ್ಣ ನೀರಾವರಿ ಪ್ರಾಥಮಿಕ ಶಾಲಾ ಕಟ್ಟಡ, ಅಂಗನವಾಡಿ, ತೋಟಗಾರಿಕೆ ಕಾಮಗಾರಿಗಳು ಇವುಗಳನ್ನು ತೆಗೆದುಕೊಳ್ಳಲಾಗಿದೆ.

ಈ) ಸಗ್ರಾಲಿಯೋ: ಬಡತನ ರೇಖೆಗಿಂತ ಕೆಳಗಿರುವಂತಹ ಗ್ರಾಮೀಣ ಜನತೆಗಾಗಿಯೇ ಹಮ್ಮಿಕೊಂಡಿರುವ ಈ ಯೋಜನೆಯಿಂದ ಫಲಾನುಭವಿಗಳು ಅವರ ಜೀವನೋಪಾಯಕ್ಕಾಗಿ ವಿವಿಧ ವೃತ್ತಿಗಳನ್ನು ಅಂದರೆ ಗುಡಿ ಕೈಗಾರಿಕೆ, ಪಶುಪಾಲನೆ, ಹೈನುಗಾರಿಕೆ, ವ್ಯಾಪಾರ, ಸಸ್ಯ ಕೈಗಾರಿಕೆ, ಪಶುಪಾಲನೆ, ಹೈನುಗಾರಿಕೆ, ವ್ಯಾಪಾರ, ಸಸ್ಯಸಂರಕ್ಷಣೆ, ಕುರಿಸಾಕಾಣಿಕೆ, ವ್ಯವಸಾಯ ಮುಂತಾದವುಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಆರ್ಥಿಕವಾಗಿ ಅಭಿವೃದ್ಧಿಯಾಗಿರುವುದು ಕಂಡುಬರುತ್ತದೆ.

ಟ್ರೈಸಂ: ಈ ಕಾರ್ಯಕ್ರಮದಡಿ ಅನೇಕ ವೃತ್ತಿಗಳಲ್ಲಿ ತರಬೇತಿಯನ್ನು ಹೊಂದಿ ಗ್ರಾಮೀಣ ಯುವ ಜನತೆಯು ಸ್ವಉದ್ಯೋಗಿಗಾಳಾಗಿರುತ್ತಾರೆ. ಕೆಲವರು ಕೂಲಿಕಾರ್ಮಿಕರಾಗಿ ಜೀವನ ನಡೆಸುತ್ತಿದ್ದಾರೆ.

ಡ್ವಾಕ್ರಾ : ಮಹಿಳೆಯ ಅಭಿವೃದ್ಧಿಗಾಗಿಯೇ ವಿಶೇಷವಾಗಿ ಹಮ್ಮಿಕೊಂಡಿರುವ ಈ ಕಾರ್ಯಕ್ರಮದ ಪ್ರಯೋಜನೆಯಿಂದ ಗ್ರಾಮೀಣ ಮಹಿಳೆಯರು ಆಕರ್ಷಿತರಾಗಿ ಅನೇಕ ಗುಡಿ ಕೈಗಾರಿಕೆಗಳು, ವ್ಯಾಪಾರ ಮುಂತಾದವುಗಳಲ್ಲಿ ತಮ್ಮ ಬಿಡುವಿನ ವೇಳೆಯನ್ನು ಸದುಪಯೋಗ ಪಡಿಸಿಕೊಳ್ಳುತ್ತಿದ್ದಾರೆ. ಸಂಸಾರ ನಿರ್ವಹಣೆಗೆ ಆರ್ಥಿಕವಾಗಿಯೂ ಮಹಿಳೆಯರು ತಮ್ಮ ಪಾಲಿನ ನೆರವು ನೀಡವುತ್ತಿರುವುದು ಒಂದು ಉತ್ತಮ ಬೆಳವಣಿಗೆ ಹಾಗೂ ಅವರಿಗೆ ನೈತಿಕ ಸ್ಥೈರ್ಯ ದೊರಕಿಸಿಕೊಟ್ಟಿದೆ.

ಜೆ.ಆರ್.ವೈ : ಈ ಯೋಜನೆಯಡಿ ರಸ್ತೆ, ಚರಂಡಿ, ಸಮುದಾಯ ಭವನ, ಪ್ರಾಥಮಿಕ ಶಾಲಾ ಕಟ್ಟಡ, ಅಂಗನವಾಡಿ, ಸಮುದಾಯ ಭವನ, ಪ್ರಾಥಮಿಕ ಶಾಲಾ ಕಟ್ಟಡ, ಅಂಗನವಾಡಿ, ಸಾಮಾಜಿಕ ಅರಣ್ಯ, ಪಂಚಾಯತ ಕಟ್ಟಡ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ವೈಯಕ್ತಿಕ ಲಾಭದಾಯಕ ಆಸ್ತಿಗಳು, ಜನಶಿಕ್ಷಣ ನಿಲಯ ಇತ್ಯಾದಿ.

ಇಂದಿರಾ ಅವಾಜ್‌ಯೋಜನೆ: ಈ ಯೋಜನೆಯಡಿ ಬಡ ಕುಟುಂಬಗಳಿಗಾಗಿ ಮನೆಗಳನ್ನು ತೆಗೆದುಕೊಳ್ಳಲಾಗಿದೆ.

ದಶಲಕ್ಷ ಬಾವಿ ಯೋಜನೆ : ಈ ಯೋಜನೆಯಡಿ ತೆರೆದ ಬಾವಿ, ಭೂಸಾರ ಸಂರಕ್ಷಣಾ ಕಾಮಗಾರಿಗಳು, ಸಣ್ಣ ನೀರಾವರಿ ಇತ್ಯಾದಿ.

ಉ.ಭ.ಯೋ : ಈ ಯೋಜನೆಯಡಿ ರಸ್ತೆ, ಕಟ್ಟಡ, ಸಣ್ಣ ನೀರಾವರಿ, ಅರಣ್ಯ, ಅಂಗವಾಡಿ, ಪ್ರಾಥಮಿಕ ಶಾಲಾಕಟ್ಟಡ ತೋಟಗಾರಿಕೆ ಕಾಮಗಾರಿಗಳು ಇತ್ಯಾದಿ.

ನೆಮ್ಮದಿ : ಈ ಯೋಜನೆಯಡಿ ರಸ್ತೆ, ಸಣ್ಣ ನೀರಾವರಿ ಪ್ರಾಥಮಿಕ ಶಾಲಾ ಕಟ್ಟಡ, ಅಂಗನವಾಡಿ, ತೋಟಗಾರಿಕೆ ಕಾಮಗಾರಿಗಳು ಇವುಗಳನ್ನು ತೆಗೆದುಕೊಳ್ಳಲಾಗಿದೆ.